ಓ ಎಸ್ ನಂಃ 17/2017
ಪಿ ಡಬ್ಲ್ಯೂಃ 3
ದಿನಾಂಕ 16-10-2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಎಸ್ ಎನ್ ಜಿ ವಕೀಲರಿಂದಃ</u>

ಜಯಣ್ಣ ನನಗೆ 5-6 ವರ್ಷಗಳಿಂದ ಪರಿಚಯ ಇದೆ. 1ನೇ ಪ್ರತಿವಾದಿ ನನಗೆ ಸುಮಾರು 20 ವರ್ಷಗಳಿಂದ ಪರಿಚಯ. ನನಗೆ ಸ್ವಂತ ಜಮೀನುಗಳು ಬಿ ಕೋಡಿಹಳ್ಳಿಯಲ್ಲಿವೆ. ಕರಾರುಪತ್ರದಲ್ಲಿ 2 ಎಕರೆ 14 ಗುಂಟೆ ಮತ್ತು ಮುಕ್ಕಾಲು ಎಕರೆ ಜಮೀನು ತೋರಿಸಲಾಗಿದೆ. ಅವೆರೆಡು ಖಾಲಿ ಜಮೀನುಗಳು. ದಾವಾ ಆಸ್ತಿಗಳ ಪೈಕಿ ಒಂದು ತರೀ ಜಮೀನು ಎಂದರೆ ನಿಜ. ದಾವಾ ಆಸ್ತಿ ಇರುವ ಅಕ್ಕಪಕ್ಕದ ಜಮೀನುಗಳು ಎಕರೆಗೆ 20 ಲಕ್ಷ ರೂ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ, 6-7 ಲಕ್ಷ ಬೆಲೆ ಬಾಳಬಹುದು. ವಾದಿ ಮತ್ತು 1ನೇ ಪ್ರತಿವಾದಿ ನಡುವೆ ಚೋಮನಹಳ್ಳಿಯಲ್ಲಿ ಮಾತುಕತೆಯಾದಾಗ ನಾನು ಸಹ ಇದ್ದೆ. ಕರಾರುಪತ್ರ ನೊಂದಣಿಯಾಗುವ ಎರಡು ದಿನಗಳ ಹಿಂದೆ ಮಾತುಕತೆಯಾಗಿದೆ. ಆಗ ನಾನು ವಾದಿ, 1ನೇ ಪ್ರತಿವಾದಿ ಮತ್ತು ಈ ಕೇಸಿನಲ್ಲಿ ಸಾಕ್ಷಿ ಹೇಳಲು ಬಂದಿರುವ ಕುಮಾರಪ್ಪ ಇವರೆಲ್ಲಾರೂ ಇದ್ದೇವು. ಆ ದಿನ 1ನೇ ಪ್ರತಿವಾದಿಗೆ ವಾದಿ ಹಣ ಕೊಟ್ಟಿಲ್ಲ, ಉಪನೊಂದಣಾಧಿಕಾರಿ ಕಚೇರಿಯಲ್ಲಿ ಹಣ ಕೊಟ್ಟಿದ್ದಾರೆ.

ಕರಾರುಪತ್ರ ನೊಂದಣಿಯಾಗುವ ಕಾಲಕ್ಕೆ ನಾನು 2 ಸಹಿಗಳನ್ನು ಮಾಡಿದ್ದೇನೆ, ಸರಿಯಾಗಿ ನೆನಪಿಲ್ಲ. ನಾನು ಉಪನೊಂದಣಾಧಿಕಾರಿ

ಕಚೇರಿಯಲ್ಲಿ ಮಾತ್ರ ಸಹಿ ಮಾಡಿದ್ದೇನೆ, ನೋಟರಿಯವರ ಮುಂದೆ ಸಹಿ ಮಾಡಿಲ್ಲ.

ಕರಾರುಪತ್ರ ನೊಂದಣಿಯಾದ ದಿನವೇ ವಾದಿ 1ನೇ ಪ್ರತಿವಾದಿಗೆ ಎದುರುಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಡಿಸೆಂಬರ್ ತಿಂಗಳಲ್ಲಿ 1ನೇ ಪ್ರತಿವಾದಿ ಮತ್ತು ವಾದಿ ನಡುವೆ ಹಣ ತೆಗೆದುಕೊಳ್ಳುವ ಮತ್ತು ಕೊಡುವ ವ್ಯವಹಾರ ನಡೆಯಿತು, ನಿಖರವಾದ ದಿನಾಂಕ ನನಗೆ ನೆನಪಿಲ್ಲ. ವಾದಿಯಿಂದ 1ನೇ ಪ್ರತಿವಾದಿ 3 ಲಕ್ಷ ರೂ ಸಾಲ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ವಾದಿಯಿಂದ 1ನೇ ಪ್ರತಿವಾದಿ ಪಡೆದುಕೊಂಡಿರುವ ಸಾಲದ ಬಾಬ್ತು ಕರಾರುಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಾದಿಯಿಂದ 3 ಲಕ್ಷ ರೂ ಸಾಲ ಪಡೆದುಕೊಂಡಿದ್ದ ಬಾಬ್ತು 1ನೇ ಪ್ರತಿವಾದಿ ಕರಾರುಪತ್ರ ಬರೆದುಕೊಟ್ಟಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ವಾದಿ ನನ್ನ ಸ್ನೇಹಿತರಾದ ಕಾರಣ ಅವರ ಪರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಜಮೀನನ್ನು ಮಾರಾಟ ಮಾಡುವ ಪರಿಸ್ಥಿತಿ ಇರಲಿಲ್ಲ ಮತ್ತು ಕರಾರುಪತ್ರದಲ್ಲಿ ನಮೂದಿಸಿರುವ ಕಡಿಮೆ ಮೊತ್ತಕ್ಕೆ ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ಕರಾರುಪತ್ರವಾದ ದಿನವೇ ವಾದಿಯಿಂದ 1ನೇ ಪ್ರತಿವಾದಿ ಪಡೆದುಕೊಂಡಿದ್ದ 3 ಲಕ್ಷ ಸಾಲದ ಹಣವನ್ನು ಬಡ್ಡಿ ಸಮೇತ ತೀರುವಳಿ ಮಾಡಿದ ಕೂಡಲೇ ಕರಾರುಪತ್ರವನ್ನು ರದ್ದುಗೊಳಿಸಬೇಕೆಂದು

ಅವರಿಬ್ಬರ ನಡುವೆ ಎದುರುಕರಾರುಪತ್ರವಾಗಿದೆ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.
ಕಡೂರು.